

ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ

ಕಗ್ಗತ್ತಲೆಯ ನಡುವೆ ಹಣತೆ ಉರಿಯುತ್ತಿದೆ. ಹಣತೆಯೊಳಗಿನ ಎಣ್ಣೆ ಖಾಲಿಯಾಗಿದೆ. ದೀಪದ ಬೆಳಕು ಮೆಲ್ಲಗೆ ಕಂತುತ್ತಿದೆ. ಗಾಳಿಯೂ ಜೋರು ಜೋರು ಬೀಸುತ್ತಿದೆ. ಮೆಲ್ಲಗೆ ಸುಳಿದು ದೀಪದ ಕುಡಿಯ ಜತೆ ಚೆನ್ನಾಟವಾಡುವ ತಂಗಾಳಿ ಅಲ್ಲ ಅದು; ಬೆಳಕನ್ನು ಆರಿಸಲೆಂದೇ ಬಂದಂತಿರುವ ಬಿರುಸು ಗಾಳಿ.

ಹಣತೆಯ ಒಡಲೊಳಗೆ ಎಣ್ಣೆ ಎರೆದು, ಹತ್ತಿಯನ್ನು ಹೊಸೆದು ಹೊಸೆದು ಬತ್ತಿ ಕಟ್ಟಿ ಎಲ್ಲಿಂದಲೋ ಬೆಂಕಿ ತಂದು ದೀಪ ಬೆಳಗಿ, ಕತ್ತಲನ್ನು ಸೋಲಿಸಿದೆ ಎಂದು ಸಂಭ್ರಮಿಸಿದ್ದ ಜೀವ ಈ ಎಲ್ಲವನ್ನೂ ನೋಡುತ್ತ ಕೂತಿದೆ...

ಕೊಂಚ ಹೊಯ್ದಾಡಿ 'ಭಗ್' ಎಂದು ಒಮ್ಮೆಲೆ ನಂದಿಹೋಯಿತು ಬೆಳಕಿನ ಕುಡಿ. ಅದನ್ನೇ ಕಾಯುತ್ತಿದ್ದಂತೆಯೇ ಕಗ್ಗತ್ತಲು ಮುಗಿಬಿದ್ದು ಎಲ್ಲವನ್ನೂ ಅವುಚಿಕೊಂಡಿತು. ಕೊನೆಯ ಉಸಿರೋ ಎಂಬಂತೆ ಬತ್ತಿ ಕೆಂಪಗಾಗಿ ನಿಗಿನಿಗಿ ಹೊಳೆಯುತ್ತಿದೆ. ಅದರಿಂದ ಎದ್ದ ಬಿಳೀ ಹೊಗೆ ಮೊದಲು ಚೂಪಾಗಿ ನಂತರ ಹರವಾಗಿ, ಬೆಳಕು ಸತ್ತ ಸುದ್ದಿಯನ್ನು ಯಾರಿಗೋ ಸುದ್ದಿ ಮುಟ್ಟಿಸಲೆಂಬಂತೆ ದಿಕ್ಕೆಟ್ಟು ಡೊಂಕು ಡೊಂಕಾಗಿ ಹರಡಿ ಗಾಳಿಯೊಟ್ಟಿಗೆ, ಕತ್ತಲೊಟ್ಟಿಗೆ ಸೇರಿ ಸರಿದುಹೋಗುತ್ತಿದೆ.

ಹೇಗೆ ಸತ್ತಿತು ಬೆಳಕು? ಯಾರು ಕೊಂದರು ಅದನ್ನು? ಬೀಸಿದ ಗಾಳಿಯೆ? ತೀರಿದ ಎಣ್ಣೆಯೇ? ಒಣಗಿದ ಬತ್ತಿಯೇ? ಸುತ್ತಲಿನ ಕತ್ತಲೆಗೆ ಅಂಜಿ ಮಾಡಿಕೊಂಡಿತೆ ಆತ್ಮಹತ್ಯೆ? ಉರಿವಷ್ಟೂ ಹೊತ್ತೂ ಕತ್ತಲೆಯನ್ನು ಸೋಲಿಸಿದೆ ಎಂದು ಅನಿಸಿದ್ದು ಬರಿಯ ಭ್ರಮೆಯೆ? ಯಾಕೆ ಕತ್ತಲೆಯ ನಡುವೆ ನಾವು ಕಟ್ಟಿದ ಬೆಳಕಿನ ಮನೆಗಳೆಲ್ಲ ಕ್ಷಣ ಬೆಳಗಿ ಕುಸಿದು ಹೋಗುತ್ತವೆ?

—ದೀಪ ಹಚ್ಚಿದ್ದ ಆ ಜೀವಕ್ಕಿದು ಬೆಳಕಿನ ಸಾವು. ತುಸು ಹೊತ್ತು ನಕ್ಕು ಬಾಡಿ ಉದುರಿಹೋಗಿ ನೋವು ಕೊಡುವ ಕನಸಿನ ಹೂವು. ಆದರೆ ಹಗಲಿನ ಪಾಲಿಗೆ ಅದೊಂದು ಮಾಹಿತಿ ಅಷ್ಟೆ. ದೀಪವೊಂದು ಆರಿದ 'ಇನ್‌ಫಾರ್ಮೇಶನ್'! ಮನಸೊಳಗೆ ಕಚ್ಚಿ, ಮೈಯೆಲ್ಲ ಆವರಿಸಿ ಹಿಂಡುವ 'ಸುದ್ದಿ'ಗೂ, ಬರಿದೇ ದಾಖಲಾಗುವ 'ಇನ್‌ಫಾರ್ಮೇಶನ್'ಗೂ ನಡುವೆ ಇರುವ ವ್ಯತ್ಯಾಸ